ದಿನಾಂಕಃ **29.07.2026** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ **1**ನೇ ಪ್ರತಿವಾದಿಯ ಪರ ಶ್ರೀ ಟಿ ಜಿ ಎಸ್ ವಕೀಲರಿಂದ ನ್ಯಾಯಾಲಯದ ಅನುಮತಿಯ ಮೇರೆಗೆಃ

ನಾನು ಅನಕ್ಷರಸ್ಥೆ. ಈ ದಾವೆಯನ್ನು ನಾವು ಹಣ ಪಡೆದವರ ಮೇಲೆ ಹಾಕಿರುತ್ತೇವೆ. ಈ ದಾವೆಯನ್ನು ನಾವು ಅಣ್ಣ - ತಮ್ಮಂದಿರು, ಅಕ್ಕ-ತಂಗಿಯರು ಜಮೀನು ಖರೀದಿಸಿರುವವರಿಂದ ಹಣ ಪಡೆದ ಹಿನ್ನೆಲೆಯಲ್ಲಿ ಅವರಿಗೆ ಜಮೀನು ಬರೆದುಕೊಡಬೇಕೆಂದು ಹಾಕಿರುತ್ತೇನೆ.

1ನೇ ಪ್ರತಿವಾದಿ ನನ್ನ ಮಲತಾಯಿ. 2 ಮತ್ತು 6ನೇ ಪ್ರತಿವಾದಿಗಳು ನನ್ನ ತಮ್ಮಂದಿರು, 3ನೇ ಪ್ರತಿವಾದಿ ನನ್ನ ಮಗಳು, 4ನೇ ಪ್ರತಿವಾದಿ ನನ್ನ ಅಳಿಯ, 5 ಮತ್ತು 7ನೇ ಪ್ರತಿವಾದಿಗಳು ನನ್ನ ಮೊಮ್ಮಕ್ಕಳು.

ಪ್ರಶ್ನೆಃ ಏಷ್ಟು ಹಣಕ್ಕೆ ಸಂಬಂಧಿಸಿದಂತೆ ಈ ದಾವೆಯಲ್ಲಿ ಹೇಳಲಾಗಿದೆ?

ಉತ್ತರಃ ಒಟ್ಟು 40 ಲಕ್ಷಕ್ಕೆ ಮಾತುಕತೆ ಆಗಿ 35 ಲಕ್ಷ ರೂಪಾಯಿ ಪಡೆದಿದ್ದೇವೆ, ಇನ್ನು 5 ಲಕ್ಷ ರೂಪಾಯಿ ಪಡೆದು ಕ್ರಯಪತ್ರ ಬರೆದುಕೊಡಬೇಕು.

40 ಲಕ್ಷ ರೂಪಾಯಿ ಹಣದ ಮಾತುಕತೆ 6 ತಿಂಗಳ ಹಿಂದೆ ದಾಬಸ್ ಪೇಟೆಯಲ್ಲಿ ಆಗಿರುತ್ತದೆ. ದಾಬಸ್ ಪೇಟೆಯಲ್ಲಿ ನಿಖರವಾದ ಜಾಗ ಗೊತ್ತಿಲ್ಲ. ನಾನೂ ಕೂಡ ಮಾತುಕತೆಗೆ ಹೋಗಿದ್ದೆ ಮತ್ತು ದಾಬಸ್ ಪೇಟೆಯಲ್ಲಿ ಸಹಿ ಮಾಡಿದ್ದೇನೆ. ಮಾತುಕತೆಯಲ್ಲಿ ಜಮೀನು ಖರೀದಿಸಿದವರು, ನನ್ನ ತಮ್ಮಂದಿರು ಮತ್ತು ನಾನು ಒಟ್ಟು 5 ಜನ ಇದ್ದೆವು. ಮಾತುಕತೆ ಯಾವ ಹೊತ್ತಿನಲ್ಲಿ ಆಗಿದೆ ನೆನಪಿಲ್ಲ.

ನಾನು ದಾಬಸ್ ಪೇಟೆಯಲ್ಲಿ ಖಾಲಿ ಪೇಪರ್ ಗೆ ಹೆಬ್ಬೆಟ್ಟಿನ ಗುರುತು ಹಾಕಿದ್ದು, ಅದನ್ನು ಟೈಪ್ ಮಾಡಿಸಲು ನನ್ನ ತಮ್ಮ 6ನೇ ಪ್ರತಿವಾದಿ ತೆಗೆದುಕೊಂಡು ಹೋಗಿರುತ್ತಾನೆ. ನಾನು ಹೆಬ್ಬೆಟ್ಟಿನ ಗುರುತನ್ನು ಒಂದು ಜಾಗದಲ್ಲಿ ಮಾತ್ರ ಹಾಕಿರುತ್ತೇನೆ. ನಾನು ಹೆಬ್ಬೆಟ್ಟಿನ ಗುರುತು ಹಾಕಿದ ಪತ್ರದ ಮೌಲ್ಯ ನನಗೆ ಗೊತ್ತಿಲ್ಲ. ಖರೀದಿದಾರರು 35 ಲಕ್ಷ ರೂಪಾಯಿ ನಗದು ಕೊಟ್ಟಿರುತ್ತಾರೆ. 500 ಮತ್ತು 200 ರೂಪಾಯಿ ಮುಖಬೆಲೆಯ ನೋಟುಗಳನ್ನು ಕೊಟ್ಟಿದ್ದಾರೆ. ಮಾತುಕತೆ ಆದ ದಿನವೇ ಹಣ ಕೊಟ್ಟಿದ್ದಾರೆ. ಹಣದ ಏಣಿಕೆಯನ್ನು

ನನ್ನ ತಮ್ಮಂದಿರು ಮಾಡಿದ್ದಾರೆ. ಪತ್ರಕ್ಕೆ ನಾನು ಮತ್ತು 1ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತು ಹಾಕಿದ್ದು, ಉಳಿದವರು ಸಹಿ ಮಾಡಿರುತ್ತಾರೆ. ಉಳಿದವರೆಲ್ಲರೂ ಪತ್ರವನ್ನು ನನ್ನ ತಮ್ಮ ಟೈಪ್ ಮಾಡಿಸಿ ತಂದ ನಂತರ ಸಹಿ ಮಾಡಿದ್ದಾರೆ. ಪತ್ರವನ್ನು ಕೃಷ್ಣಮೂರ್ತಿ ಎನ್ನುವವರು ಮಾಡಿಸಿರುತ್ತಾರೆ. ಕೃಷ್ಣಮೂರ್ತಿಯವರು ಎಲ್ಲಿಯವರು ನನಗೆ ಗೊತ್ತಿಲ್ಲ. ಪತ್ರಕ್ಕೆ ನಾನು ಕೋರ್ಟ್ ನ ಬಳಿ ಹೆಬ್ಬೆಟ್ಟು ಗುರುತು ಹಾಕಿರುತ್ತೇನೆ. ಕರಾರುಪತ್ರದಲ್ಲಿ ಏಷ್ಟು ಪುಟಗಳು ಇವೆ ನನಗೆ ಗೊತ್ತಿಲ್ಲ. ಪತ್ರಕ್ಕೆ ಸಾಕ್ಷಿದಾರರು ಯಾರು ನೆನಪಿಲ್ಲ. ಕರಾರುಪತ್ರ ಯಾವಾಗಾ ನೋಂದಾವಣಿ ಆಯಿತು ಎಂದು ನನಗೆ ಗೊತ್ತಿಲ್ಲ. ನೋಂದಾವಣಿಗೆ ನನ್ನ ಆಧಾರ್ ಕಾರ್ಡ್ ಕೊಟ್ಟಿರುತ್ತೇನೆ.

ನನಗೂ ಮತ್ತು 1ನೇ ಪ್ರತಿವಾದಿಗೂ ಮುಂಚಿನಿಂದಲೂ ವೈಶಮ್ಯವಿದೆ ಎಂದರೆ ಸರಿಯಲ್ಲ. ದಾಬಸ್ ಪೇಟೆಯಲ್ಲಿ ಹೆಬ್ಬೆಟ್ಟು ಗುರುತು ಹಾಕಿದ ಮರುದಿನದ ಬೆಳಿಗ್ಗೆ ತಿಪಟೂರಿನಲ್ಲಿ ಪತ್ರ ನೋಂದಾವಣಿ ಮಾಡಿಸಿದ್ದೇವೆ. ಜಮೀನಿನ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ವಿವರಣೆಗಳ ಮಾಹಿತಿಯನ್ನು ಯಾರು ಕೊಟ್ಟರು ಎಂದರೆ ನನಗೆ ನೆನಪಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ನಾನು ಅನಕ್ಷರಸ್ಥೆ ನಾನೇನೂ ಓದಿಲ್ಲ. ವಾದಿಗಳು ಹೇಳಿಕೊಟ್ಟಂತೆ ನಾನು ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾವು ಕ್ರಯದ ಕರಾರು ಬರೆದುಕೊಟ್ಟಿದ್ದೇವೆ ಎಂದು ಹೇಳುವ ಜಮೀನಿನ ಸರ್ವೆ ನಂಬರು, ವಿಸ್ತೀರ್ಣ, ಚಕ್ಕುಬಂಧಿ ಹೇಳಲು ನನಗೆ ಗೊತ್ತಾಗುವುದಿಲ್ಲ. ವಾದಿಗಳು 35 ಲಕ್ಷ ರೂಪಾಯಿ ಹಣವನ್ನು ಒಂದೇ ಬಾರಿ ಕೊಟ್ಟಿದ್ದಾರೆ. ನಾನು ಹೇಳುತ್ತಿರುವ ಕ್ರಯದ ಕರಾರು ಸಾಲ ಕೊಡಿಸುವುದಾಗಿ ಹೇಳಿ ಬರೆಸಿಕೊಂಡ ದಾಖಲೆ ಎನ್ನುವುದು ಸರಿಯಲ್ಲ. ನಾನು ಹೇಳಿದಂತೆ ವಾದಿಗಳು ಒಂದೇ ಕಂತಿನಲ್ಲಿ 35 ಲಕ್ಷ ರೂಪಾಯಿ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕ್ರಯದ ಕರಾರಿನ ಬಾಬ್ತು ಪ್ರತಿವಾದಿಗಳಿಗೆ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ನಾನು ಯಾವುದೇ ಹಣ ಪಡೆದಿಲ್ಲ. ತಮ್ಮಂದಿರಿಗೆ ಕೊಟ್ಟಿದ್ದೇನೆ. ನಾನು ಹೇಳಿದಂತಹ ಯಾವುದೇ ಕ್ರಯದ ಕರಾರು ವಾದಿ - ಪ್ರತಿವಾದಿಗಳ ನಡುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ

ಕುಟುಂಬದವರೊಂದಿಗೆ ನನಗೆ ಇರುವ ಮನಃಸ್ತಾಪದ ಹಿನ್ನೆಲೆಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಸಾಕ್ಷಿಯು ಗ್ರಾಮೀಣ ಭಾಗದ ಅನಕ್ಷರಸ್ಥೆಯಾಗಿದ್ದು ಆಕೆ ಗ್ರಾಮೀಣ ಸೊಗಡಿನ ಭಾಷೆಯಲ್ಲಿ ಹೇಳಿರುವ ಸಾಕ್ಷ್ಯವನ್ನು ದಾಖಲಿಸಿಕೊಂಡಿರುತ್ತೇನೆ).

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ತಿಪಟೂರು.